ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**

ಮನೆ ಮನೆಗೆ ಗಂಗೆ
ಜಲ ಜೀವನ್ ಮಿಷನ್

## ಸ್ವಚ್ಛ ಊರು, ನಿತ್ಯ ನೀರು;

# ಬಿಂಕದಕಟ್ಟಿ ಮಾದರಿ ಗ್ರಾಮಕ್ಕೆ ಟೊಂಕಕಟ್ಟಿ ನಿಂತ ಗ್ರಾಮಸ್ಥರು

ಇದು ಗದಗ ಜಿಲ್ಲೆಯ ಬಿಂಕದಕಟ್ಟಿ. ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬಿಂಕದಕಟ್ಟಿ ಮತ್ತು ಹಿರೇಹಂದಿಗೊಳ ಗ್ರಾಮಗಳಿವೆ. ಪ್ರಸ್ತುತ ಕಾಲಘಟ್ಟಕ್ಕೆ ಹೋಲಿಸಿದರೆ, ಹಿಂದೆ ಈ ಗ್ರಾಮಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆಯೇ ಎದ್ದು ಕಾಣುತ್ತಿತ್ತು. ಶುದ್ಧ ಕುಡಿಯುವ ನೀರು ದೂರದ ಬೆಟ್ಟವಾದರೆ, ಹದಗೆಟ್ಟ ರಸ್ತೆಗಳು ಹಾಗೂ ಅಸ್ವಚ್ಛತೆ ಗ್ರಾಮಕ್ಕೆ ಪ್ರಮುಖ ಸವಾಲುಗಳಾಗಿದ್ದವು. ಆದರೆ, ಈಗ ಹಾಗಿಲ್ಲ. ಪಂಚಾಯಿತಿ ಸದಸ್ಯರ ಶ್ರಮ, ಊರಿನ ಪ್ರಬುದ್ಧ ನಾಗರಿಕರ ಸಹಕಾರ ಮತ್ತು ಇಲಾಖೆಯ ಮೂಲಕ ಸರಕಾರದ ಯೋಜನೆಗಳ ಸಮರ್ಪಕ ಬಳಕೆಯೊಂದಿಗೆ ಗ್ರಾಮ ಪಂಚಾಯಿತಿಯು ಮಾದರಿ ಗ್ರಾಮವಾಗಿ ನಿಂತಿದೆ.




## ಮನೆ ಮನೆಗೂ ಹರಿದ ಗಂಗೆ

ಹಳ್ಳಿ ಹಳ್ಳಿಗಳ ಪ್ರತಿ ಮನೆಗಳಿಗೂ ಆರೋಗ್ಯಕರ ಕುಡಿಯುವ ನೀರು ಪೂರೈಸುವ ಉದ್ದೇಶದೊಂದಿಗೆ ಜಾರಿಗೊಳಿಸಲಾದ ಜಲ ಜೀವನ್ ಮಿಷನ್ ಯೋಜನೆಯಡಿಯಲ್ಲಿ **ಪ್ರತಿ ಮನೆಗಳಿಗೂ ಪೈಪ್ ಸಂಪರ್ಕ ನೀಡಲಾಯಿತು. ಕಾರ್ಯಾತ್ಮಕ ಗೃಹ ನಳ ಸಂಪರ್ಕದ (FHTC) ಮೂಲಕ ಮನೆ ಮನೆಗೂ ಗಂಗೆ ಹರಿದು ಬಂತು.** ಎರಡು ಗ್ರಾಮಗಳಿಗೆ ನೀರಿನ ಟ್ಯಾಂಕ್‌ಗಳನ್ನು ನಿರ್ಮಿಸುವ ಮೂಲಕ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನೀರಿನ ಕೊರತೆ ಸಂಪೂರ್ಣವಾಗಿ ನಿವಾರಣೆಯಾಗಿದೆ. ಮನೆ ಬಾಗಿಲಿಗೆ ಬರುವ ಜೀವಜಲವು, ಗೃಹಿಣಿಯರ ಮೊಗದಲ್ಲಿ ನಗು ಅರಳಿಸಿದೆ. ಸದ್ಯ ಮೊದಲ ಹಂತದಲ್ಲಿ ಮೂರು ತಿಂಗಳವರೆಗೆ ಪ್ರಾಯೋಗಿಕವಾಗಿ ವ್ಯಾಲ್ಯೂಮೆಟ್ರಿಕ್ ಬಿಲ್ಲಿಂಗ್ ಕೈಗೊಳ್ಳಲಾಗುತ್ತಿದೆ. ಆ ಮೂಲಕ ನೀರಿನ ಹಿತ ಮತ್ತು ಮಿತ ಬಳಕೆಗೂ ಆದ್ಯತೆ ನೀಡಲಾಗುತ್ತಿದೆ.



## ಬಯಲು ಶೌಚ ಮುಕ್ತ ಗ್ರಾಮ, ಮಹಿಳೆಯರಿಗೆ 'ಗೌರವ ಘಟಕ'

ಸ್ವಚ್ಛಗ್ರಾಮ ಅಭಿಯಾನದಡಿ, **ಪ್ರತಿಯೊಂದು ಮನೆಯಲ್ಲೂ ಶೌಚಾಲಯ ನಿರ್ಮಿಸುವ ಮೂಲಕ ಬಯಲು ಶೌಚ ಮುಕ್ತ ಗ್ರಾಮಗಳನ್ನಾಗಿ ರೂಪಿಸಲಾಗಿದೆ. ಇದರೊಂದಿಗೆ ಮಹಿಳೆಯರಿಗಾಗಿ ಪ್ರತ್ಯೇಕವಾಗಿ ಗೌರವ ಘಟಕ (ಸಮುದಾಯ ಶೌಚಾಲಯ)ವನ್ನು ನಿರ್ಮಿಸಲಾಗಿದೆ.** ಮಹಿಳಾ ಸ್ವ-ಸಹಾಯ ಸಂಘದ ಚಾಲಕಿಯರು ಕಸ ಸಂಗ್ರಹಣೆ ಹಾಗೂ ವಿಂಗಡಣೆ ಕಾರ್ಯ ಮಾಡುತ್ತಿದ್ದಾರೆ. ಇದರೊಂದಿಗೆ ಕಾಂಪೋಸ್ಟ್ ಘಟಕಗಳ ಮೂಲಕ ಹಸಿ ಕಸ ನಿರ್ವಹಣೆ ಕೂಡಾ ಮಾದರಿಯಾಗಿದೆ.

## ಹಸಿರು ವೃದ್ಧಿ , ಮಳೆ ನೀರು ಕೊಯ್ಲು

ಪಂಚಾಯಿತಿ ವ್ಯಾಪ್ತಿಯ ಎಲ್ಲ ಶಾಲೆಗಳ ರಸ್ತೆ ಬದಿಗಳು ಹಾಗೂ ರುದ್ರಭೂಮಿಯಲ್ಲಿ ಸಾವಿರಾರು ಗಿಡಗಳನ್ನು ನೆಡುವ ಮೂಲಕ, ಬರಡಾಗಿದ್ದ ಭೂಮಿಯಲ್ಲೀಗ ಹಸಿರ ಸಿರಿ ನಳನಳಿಸುತ್ತಿದೆ. **ಸರಕಾರಿ ಕಟ್ಟಡಗಳಲ್ಲಿ ಮಳೆ ನೀರು ಕೊಯ್ಲು ಆರಂಭಿಸಲಾಗಿದ್ದು , ವ್ಯರ್ಥವಾಗಿ ಹರಿದು ಸಮುದ್ರ ಸೇರುತ್ತಿದ್ದ ನೀರನ್ನು ಹಿಡಿದಿಡಲಾಗುತ್ತಿದೆ.** ಆ ಮೂಲಕ ಭವಿಷ್ಯದ ದೃಷ್ಟಿಯಿಂದ ನೀರಿನ ಸಂಗ್ರಹಣೆಗೆ ಆದ್ಯತೆ ನೀಡಲಾಗಿದೆ. ಇಷ್ಟೇ ಅಲ್ಲದೆ, ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸಿ, ಪ್ಲಾಸ್ಟಿಕ್ ನಿಷೇಧಿಸುವುದರೊದಿಗೆ ಜನಜಾಗೃತಿ ಮೂಡಿಸಲಾಗಿದೆ.

ಮನುಷ್ಯ ಪರಿಸರವನ್ನು ಯಾವಾಗ ಗೌರವಿಸುತ್ತಾನೋ, ಆಗ ಪ್ರಕೃತಿ ಕೂಡಾ ಆತನನ್ನು ಎತ್ತಿ ಮೆರೆಸುತ್ತದೆ. ಗಿಡ-ಮರಗಳು ತುಂಬಿದ ಹಸಿರು ಪರಿಸರ, ಮನೆ ಮನೆಯಲ್ಲೂ ಶೌಚಾಲಯ, ಗ್ರಾಮಗಳಲ್ಲಿ ಸಮುದಾಯ ಶೌಚಾಲಯ, ಸ್ವಚ್ಛ ಹಾಗೂ ಸುಂದರ ಬೀದಿ, ಇವೆಲ್ಲಾ ಮಾದರಿ ಗ್ರಾಮದ ಲಕ್ಷಣ. ಬಿಂಕದಕಟ್ಟಿ ಈ ಎಲ್ಲ ಅಂಶಗಳ ಸನಿಹವಿದೆ. ಪರಿಣಾಮವಾಗಿ ಜನರ ಆರೋಗ್ಯ ಮತ್ತು ಜೀವನಮಟ್ಟ ಸುಧಾರಣೆಯಾಗಿದೆ. ಮಕ್ಕಳು ಮತ್ತು ಮಹಿಳೆಯರ ಅಮೂಲ್ಯ ಸಮಯವು ಶಿಕ್ಷಣ ಮತ್ತು ಉದ್ಯೋಗಕ್ಕೆ ಬಳಕೆಯಾಗುತ್ತಿದೆ. ಕ್ರಮೇಣ ಉತ್ಪಾದಕತೆ ಹೆಚ್ಚಿ ಗ್ರಾಮಗಳ ಜನರು ಆರ್ಥಿಕವಾಗಿ ಸ್ವಾವಲಂಬಿಗಳಾಗುತ್ತಿದ್ದಾರೆ.